ಮಾತುಕತೆ

# ಹಾಡಂದ್ರೆ ಅದು ಬರೀ ಹಾಡಲ್ಲ



## ಜನಪದ ಕಲಾವಿದೆ ಶಿಲ್ಪಾ ಮುಡಬಿ ಸಂದರ್ಶನ



**ತೇಜಶ್ರೀ ಜ.ನಾ.**

ಚಿತ್ರಗಳು: ಎಸ್.ಕೆ. ದಿನೇಶ್

'ಜನಪದ ಕಲಾವಿದೆ', 'ಜಾನಪದ ಪರಿಚಾರಕಿ' ಇತ್ಯಾದಿಗಳ ಬದಲಿಗೆ ಒಬ್ಬ 'ಕಲಾವಿದೆ' ಎಂದಷ್ಟೇ ತಮ್ಮನ್ನು ಗುರುತಿಸಿಕೊಳ್ಳಲು ಬಯಸುವ ಶಿಲ್ಪಾ ಮುಡಬಿ, ತನ್ನ ಅಜ್ಜಿ ಗುಂಡಮ್ಮ ಮುಡಬಿಯವರು ಹಾಡುತ್ತಿದ್ದ ಹಾಡುಗಳನ್ನು ಕೇಳಿಸಿಕೊಳ್ಳುತ್ತ ಬೆಳೆದವರು. ಎಷ್ಟೋ ವರ್ಷಗಳ ನಂತರ ಇವೇ ಹಾಡುಗಳನ್ನು 'ತನ್ನ' ಬಗೆಯಲ್ಲಿ ಶಿಲ್ಪಾ ಅವರು ಲೋಕದ ಮುಂದಿರಿಸಿದ ಬಗೆಯಿಂದಾಗಿ ನಾವು ಈತನಕ ಕೇಳಿದ್ದ, ತಿಳಿದಿದ್ದ, ಪರಿಭಾವಿಸಿದ್ದ 'ಜನಪದ' ಪರಿಕಲ್ಪನೆಗೆ ಬೇರೆ ಆಯಾಮ ದಕ್ಕಿತು. ಶಿಲ್ಪಾ ಅವರು ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತಿಲ್ಲ. ಆದರೆ, ಅವರ ಹಾಡಿನ ಶ್ರುತಿ, ದನಿಯ ಆರ್ದ್ರತೆ, ಲಯದ ಮಟ್ಟುಗಳು ಅದೆಷ್ಟು ಸಹಜ, ಪರಿಪೂರ್ಣ!

ಏನನ್ನಾದರೂ ದಾಖಲಿಸಲು ಹೊರಟರೆ ಅದು ನಮ್ಮನ್ನು 'ಕಾಲ'ದ ಪರಿಧಿಯೊಳಗೆ ಬಂಧಿಸುತ್ತದೆ. ಆದರೆ, 'ಒಂದು' ಸತ್ಯಕ್ಕೆ ಅಂಟಿಕೊಳ್ಳದ ಮೌಖಿಕ ಪರಂಪರೆಗೆ ಸದಾ ಕಾಲದ ಬಂಧನವನ್ನು ಒಡೆಯುವ ತಹತಹ. ಈ ಪರಂಪರೆಯೊಳಗಿನ ಯಾನದಲ್ಲಿ ನಮ್ಮನ್ನು ಸೆಳೆಯುವಂತದ್ದು, ಬದುಕಿನ ಅನುಭವಗಳಿಂದ ಸಮೃದ್ಧಗೊಂಡ ಜೀವದ ಪಾಡು ಮಾತ್ರ. ಒಂದೇ ಮರದ ಹಲವು ಕವಲುಗಳಂತೆ, ಒಂದು ಪ್ರಶ್ನೆಯು ಹಲವು ಟಿಸಿಲಾಗಿ ಬೆಳೆದಂತಿರುವ ಈ ಮಾತುಕತೆಯು 'ಒಂದು' ಕಥೆಯ 'ಹಲವು' ಹೇಳುವಿಕೆಯಂತಿದೆ.